854 ಶ್ರೀ ಗೋಪಾಲ ಭಂಡಾರಿ ಹೆಚ್ : ಮಾನ್ಯ ಸಣ್ಣ ಕೈಗಾರಿಕೆಗಳು ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ಜಿಲ್ಲೆ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿನ ಸಹಾಯಧನ ವಿತರಣೆ ಮಾಡಲು ಎಷ್ಟು ಬಾಕಿ ಇದೆ?

ಆ) ಯಾವಾಗಿನಿಂದ ಬಾಕಿ ಇದೆ? (ವರ್ಷವಾರು ವಿವರ ನೀಡುವುದು)

ಇ) ರಾಜ್ಯದಲ್ಲಿ ಎಷ್ಟು ರೋಗಗ್ರಸ್ಥ ಘಟಕಗಳಿವೆ?

ಈ) ರೋಗಗ್ರಸ್ಥ ಘಟಕವೆಂದು ಘೋಷಣೆ ಮಾಡಲು ಇರುವ ಮಾನದಂಡವೇನು?

ಶ್ರೀ ವೆಂಕಟರಮಣಪ್ಪ (ಸಣ್ಣ ಕೈಗಾರಿಕೆಗಳು ಮತ್ತು ರೇಷ್ಮೆ ಸಚಿವರು) :

ಅ) ಉಡುಪಿ ಜಿಲ್ಲೆಯ 224 ಘಟಕಗಳಿಗೆ ರೂ, 599.78 ಲಕ್ಷಗಳು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ 86 ಘಟಕಗಳಿಗೆ ರೂ, 87.76 ಲಕ್ಷಗಳ ಸಹಾಯಧನ ಬಿಡುಗಡೆಗೆ ಬಾಕಿ ಇರುತ್ತದೆ.

ಆ) 2005–06 ಮತ್ತು 2006–07ನೇ ಸಾಲಿಗೆ ಶೇ.50% ಎರಡನೇ ಕಂತು ಹಾಗೂ 2007–08 ಮತ್ತು 2008–09ನೇ ಸಾಲಿಗೆ ಪೂರ್ತಿ ಮಂಜೂರಾದ ಸಹಾಯಧನ ಬಿಡುಗಡೆ ಮಾಡಲು ಬಾಕಿ ಇರುತ್ತದೆ. ವರ್ಷಾವಾರು ವಿವರ ಕೆಳಕಂಡಂತಿದೆ:

(ರೂ,ಲಕ್ಷಗಳಲ್ಲಿ)

ವರ್ಷ	ಉಡುಪಿ		ದಕ್ಷಿಣ ಕನ್ನಡ	
	ಘಟಕಗಳ ಸಂಖ್ಯೆ	ಮೊತ್ತ	ಘಟಕಗಳ ಸಂಖ್ಯೆ	ಮೊತ್ತ
2005–06	131	145.70	63	44.35
2006–07	0	0	6	10.92
2007–08	42	182.33	13	27.42
2008–09	51	271.75	4	5.07
ಒಟ್ಟು	**224**	**599.78**	**86**	**87.76**

ಇ) ರಾಜ್ಯದಲ್ಲಿ ಒಟ್ಟು 1221 ರೋಗಗ್ರಸ್ಥ ಕೈಗಾರಿಕೆಗಳನ್ನು ಗುರುತಿಸಲಾಗಿದೆ.

ಈ) ರೋಗಗ್ರಸ್ಥ ಘಟಕವೆಂದು ಘೋಷಣೆ ಮಾಡಲು ಈ ಕೆಳಕಂಡ ಮಾನದಂಡ ಇರುತ್ತದೆ:–

ಅ) ಆರ್.ಬಿ.ಐ. ಮಾರ್ಗಸೂಚಿ ದಿನಾಂಕ: 16–1–2002 ರನ್ವಯ ಯಾವುದೇ ಘಟಕ ಪಡೆದಿರುವ ಸಾಲದ ಮೊತ್ತವು ಆರು ತಿಂಗಳಿಗಿಂತ ಹೆಚ್ಚುವರಿಯಾಗಿ ಅಸಲು ಅಥವಾ ಬಡ್ಡಿ ಪಾವತಿಸದೇ ಇದ್ದಲ್ಲಿ

ಅಥವಾ

ಆ) ಹಿಂದಿನ ವರ್ಷದಲ್ಲಿ ಸಂಚಿತ ಹಣದ ನಷ್ಟವು ಶೇ.50ಕ್ಕಿಂತ ಹೆಚ್ಚಾಗಿ ನೆಟ್ ವರ್ತ್ ಎರೋಜನ್ ಆಗಿದ್ದಲ್ಲಿ

ಮತ್ತು

ಇ) ಘಟಕವು ತನ್ನ ವಾಣಿಜ್ಯ ಉತ್ಪಾದನೆ ಪ್ರಾರಂಭಿಸಿ 2 ವರ್ಷಗಳಾಗಿದ್ದಲ್ಲಿ ಅಂತಹ ಘಟಕವು ರೋಗಗ್ರಸ್ಥ ಘಟಕವೆಂದು ಘೋಷಿಸಬಹುದಾಗಿರುತ್ತದೆ.

1042 ಶ್ರೀ ಹ್ಯಾರಿಸ್ ಎನ್.ಎ : ಮಾನ್ಯ ಸಣ್ಣ ಕೈಗಾರಿಕೆಗಳು ಮತ್ತು ರೇಷ್ಮೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿನ ಸಣ್ಣ ಕೈಗಾರಿಕೆಗಳು ಅಭಿವೃದ್ಧಿ ಹೊಂದಲು ಸರ್ಕಾರ ಜಾರಿಗೊಳಿಸಿರುವ ಯೋಜನೆಗಳು ಯಾವುವು?

ಆ) ಜಾಗತಿಕ ಆರ್ಥಿಕ ಕುಸಿತದ ಪರಿಣಾಮವನ್ನು ಎದುರಿಸಲು ಸಣ್ಣ ಕೈಗಾರಿಕೆಗಳಿಗೆ ಸರ್ಕಾರದ ಪ್ರೋತ್ಸಾಹಕ ಕ್ರಮಗಳೇನು?

ಇ) 2008–09ನೇ ಆರ್ಥಿಕ ವರ್ಷದಲ್ಲಿ ಮುಚ್ಚಲ್ಪಟ್ಟ ಸಣ್ಣ ಕೈಗಾರಿಕಾ ಘಟಕಗಳ ಸಂಖ್ಯೆ ಎಷ್ಟು? (ವಿವರ ನೀಡುವುದು);

ಶ್ರೀ ವೆಂಕಟರಮಣಪ್ಪ (ಸಣ್ಣ ಕೈಗಾರಿಕೆಗಳು ಮತ್ತು ರೇಷ್ಮೆ ಸಚಿವರು) :

ಅ) ಕರ್ನಾಟಕ ರಾಜ್ಯ ಸರ್ಕಾರವು ಹೊಸ ಕೈಗಾರಿಕಾ ನೀತಿ 2009–14ರ ಪ್ರಕಾರ ಹಿಂದುಳಿದ, ಅತೀ ಹಿಂದುಳಿದ, ಅತ್ಯಂತ ಹಿಂದುಳಿದ ತಾಲ್ಲೂಕುಗಳಲ್ಲಿ ಅತೀ ಸಣ್ಣ ಮತ್ತು ಸಣ್ಣ ಕೈಗಾರಿಕೆಗಳಿಗೆ ಹೆಚ್ಚಿನ ಪ್ರೋತ್ಸಾಹ ಘೋಷಿಸಲಾಗಿದೆ. ಅದರಲ್ಲಿ ಮುಖ್ಯವಾಗಿ ಹೊಸದಾಗಿ ಸ್ಥಾಪಿಸಲಾದ ಕೈಗಾರಿಕೆಗಳಿಗೆ ಸಹಾಯಧನವನ್ನು ಶೇ.10 ರಿಂದ 20ರವರೆಗೂ ಗರಿಷ್ಠ ರೂ.20.00 ಲಕ್ಷಗಳನ್ನು ಮಂಜೂರಾತಿ ಮಾಡುವುದು, ಮುದ್ರಾಂಕ ಶುಲ್ಕ ವಿನಾಯಿತಿ ಹಾಗೂ ಪ್ರವೇಶ ತೆರಿಗೆ ವಿನಾಯಿತಿ ಮತ್ತು ಇತರೆ ಸೌಲಭ್ಯ ಒದಗಿಸಲಾಗಿದೆ.